# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 18.01.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ॥ ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಸುಮಂತ್ ಗೌಡ ಸಿ. ಎಸ್., ಸಹಾಯಕ ಅಭಿಯಂತರರು, ವಾರ್ಡ್ ನಂ.42 ಹಾಗೂ ಸದಸ್ಯ ಕಾರ್ಯದರ್ಶಿ
3. ಮಣಿ ಮೇಘಲೈ, ಕಿರಿಯ ಆರೋಗ್ಯ ಪರಿವೀಕ್ಷಕರು,
4. ದೀಪಕ್.ಹೆಚ್.ಸಿ, ಸ.ಅ.ಜಲಮಂಡಳಿ
5. ರಮೇಶ.ಸಹಾಯಕ ಕಂದಾಯ ಅಧಿಕಾರಿ ವಾಡ್ ್ ನಂ.42
6. ಎಂ.ನಾಗರಾಜು.ಬೆಸ್ಕಾಂ
7. ನಾರಾಯಣಸ್ವಾಮಿ, ಮೇಲ್ವಿಚಾರಕರು
8. ದೇವರಾಜ್, ಮೇಲ್ವಿಚಾರಕರು
9. ದಾಕ್ಷಯಣಿ ಲಿಂಕ್ ವರ್ಕರ್
10. ಪ್ರಮೀಳ ಲಿಂಕ್ ವರ್ಕರ್

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ನೋಡಲ್ ಅಧಿಕಾರಿಗಳು ರವರು ಮಾತನಾಡಿ ಕಸದ ನಿರ್ವಹಣೆ ಬಗ್ಗೆ ವಿಚಾರಣೆ ನಡೆಸಿ, ಹಿಂದಿನ ಸಭೆಯಲ್ಲಿ ಸೂಚಿಸಿದ್ದ ಎಲ್ಲಾ ಸೂಚನೆಗಳನ್ನು ಸಮರ್ಪಕವಾಗಿ ನಿರ್ವಹಿಸಿರುವುದಕ್ಕೆ ಅವರ ಕಾರ್ಯವೈಖರಿಗಳನ್ನು ಸಭೆಯಲ್ಲಿ ಪ್ರಶಂಸಿಸಲಾಯಿತು ಮತ್ತು ಶ್ಲಾಘನಿಯ ಮಾತುಗಳನ್ನು ಹಾಡುತ್ತ ಕಿರಿಯ ಆರೋಗ್ಯ ನಿರೀಕ್ಷಕಿ ಮತ್ತು ಸೂಪರ್ ವೈಸರ್‌ಗಳು ಹಾಗೂ ಮಾರ್ಷಲ್ ರವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಹಾಗೂ ಕಸದ ಆಟೋಗಳಿಗೆ ಸ್ಟಿಕರ್‌ಗಳು ಎಲ್ಲಾ ವಾಹನಗಳಲ್ಲಿ ದುರಸ್ಥಿಯಾಗಿರುವುದರಿಂದ ಕೂಡಲೆ ಎಲ್ಲಾ ಕಸದ ವಿಲೇವಾರಿ ವಾಹನಗಳಿಗೆ ಸ್ಟಿಕರ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು. ಮತ್ತು ಪ್ರತಿ ರಸ್ತೆಯಲ್ಲಿ ಕಸ ವಿಂಗಡಣೆಯಾದ ನಂತರ ಸಾರ್ವಜನಿಕರಿಂದ ಸಹಿ ಪಡೆಯಲು ಸೂಚಿಸಿದರು.

***ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.42***

Scanned by CamScanner

ವಾರ್ಡ್‌ನ ಸದಸ್ಯರಾದ ವಾಸೀಂ ಅಕ್ರಂ ರವರು ಮಾತನಾಡಿ ಲಕ್ಷ್ಮಿದೇವಿನಗರ ಮುಖ್ಯರಸ್ತೆಯ ರಂಗನಾಥ್ ಬಾರ್ ಬಳಿ ಸಾರ್ವಜನಿಕರು ಕಸವನ್ನು ಎಸೆದು ಹೋಗುತ್ತಿರುವುದಾಗಿ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರಲ್ಲಿ ಕೋರಿದಾಗ ಸ್ಥಳದಲ್ಲಿ ಕಸ ಹಾಕುವವರಿಗೆ ದಂಡ ವಿಧಿಸುವಂತೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು

***ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಮಾರ್ಷಲ್ ವಾರ್ಡ್ ನಂ.42***

ಕಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ ವಾರ್ಡಿನಲ್ಲಿ ಕಸವನ್ನು ತೆಗೆದುಹಾಕಲು ಸಲಕರಣೆಗಳು ಇಲ್ಲದಿರುವುದನ್ನು ಅಧ್ಯಕ್ಷರಿಗೆ ಹೇಳಿ ಕೂಡಲೇ ಅಧಿಕಾರಿಗಳಿಂದ ಕೊಡಿಸಲು ಸೂಚಿಸಿದರು.

***ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ. ವಾರ್ಡ್ ನಂ.42***

ವಾರ್ಡ್‌ನ ಸದಸ್ಯರಾದ ಅಮ್ಮು ರವರು ಮಾತನಾಡಿ ದಾಸನಾಯಕನಪಾಳ್ಯ. ಕಾವೇರಿನಗರ ಮತ್ತು ಕುವೆಂಪು ಪ್ರತಿಮೆಯಿಂದ ಸುಮ್ಮನಹಳ್ಳಿ ಬ್ರಿಡ್ಜ್‌ರವರೆವಿಗೂ ಬೀದಿದೀಪಗಳು ಇಲ್ಲದಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತದೆ ಎಂದು ಅಧ್ಯಕ್ಷರಲ್ಲಿ ನಿವೇದಿಸಲಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು.

***ಕ್ರಮ: ಸಹಾಯಕ ಅಭಿಯಂತರರು, ಬೀದಿದೀಪಗಳು ವಾರ್ಡ್ ನಂ.42***

ಕಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ ವಾರ್ಡಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಗೆ ಶೌಚಾಲಯಗಳ ಸೌಲಭ್ಯವಿರುವುದಿಲ್ಲವೆಂದು ಅಧ್ಯಕ್ಷಕರ ಗಮನಕ್ಕೆ ತರಲಾಗಿ My City My Budget-2021 ರ ಅಡಿಯಲ್ಲಿ ನಿರ್ಮಾಣ ಮಾಡಿಸಿಕೊಡಲು ಸೂಕ್ತ ಸ್ಥಳಗಳನ್ನು ಗುರುತಿಸಿ ಕ್ರೂಡೀಕೃತ ಮಾಹಿತಿಯನ್ನು ಸಂಬಂಧಪಟ್ಟವರಿಗೆ ಕೂಡಲೇ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

***ಕ್ರಮ: ಸಹಾಯಕ ಅಭಿಯಂತರರು, ವಾರ್ಡ್ ನಂ.42***

ವಾರ್ಡ್‌ನ ಸದಸ್ಯರಾದ ಕವಿತಾ ರವರು ಕಾವೇರಿನಗರ 4ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಸಮಸ್ಯೆಯನ್ನು ಸಭೆಯ ಗಮನಕ್ಕೆ ತರಲಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು

***ಕ್ರಮ: ಸಹಾಯಕ ಅಭಿಯಂತರರು, ಜಲಮಂಡಳಿ ವಾರ್ಡ್ ನಂ.42***

Scanned by CamScanner

ವಾರ್ಡ್ ನ ಸದಸ್ಯರಾದ ಸಹದೇವನ್ ರವರು ಮಾತನಾಡಿ ವಿ.ಕೆ.ರಾಮಣ್ಣ ಬಡಾವಣೆಯಲ್ಲಿ ಬೀದಿ ದೀಪದ ಕಂಬ ಬಾಗಿರುವುದರಿಂದ ಯಾವ ಕ್ಷಣದಲ್ಲಿ ಬೇಕಾದರು ಕೆಳಗೆ ಬೀಳಬಹುದೆಂದು ತಿಳಿಸಲಾಗಿ ಕೂಡಲೇ ಸರಿಪಡಿಸಲು ಅಧ್ಯಕ್ಷರು ಅಧಿಕಾರಿಗಳಿಗೆ ಸೂಚಿಸಿದರು.

*ಕ್ರಮ: ಸಹಾಯಕ ಅಭಿಯಂತರರು, ಬೆಸ್ಕಾಂ ವಾರ್ಡ್ ನಂ.42*

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಸದರಿ ಸಭೆಯಲ್ಲಿ ಸೂಚಿಸಿರುವ ಎಲ್ಲಾ ಸಮಸ್ಯೆಗಳನ್ನು ಮುಂದಿನ ಸಭೆಯಲ್ಲಿ ಸಂಬಂಧಿಸಿದ ಅಧಿಕಾರಿಗಳು ವರಧಿ ನೀಡಬೇಕೆಂದು ಅಧ್ಯಕ್ಷರು ತಿಳಿಸಿದರು. ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

(ಸುಮಂತ್ ಗೌಡ ಸಿ. ಎಸ್.)
ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:42

(ಡಾ|| ಎಂ. ಜಿ. ಹಳ್ಳಿ ಶ್ರೀವರಾಂ)
ವಾರ್ಡ್ ನೋಡಲ್ ಅಧಿಕಾರಿ
ಹಾಗೂ ಅಧ್ಯಕ್ಷರು, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ:42

Scanned by CamScanner